ಸಂತೋಷದಿಂದ ಕುಣಿದು ನನ್ನನ್ನು ಎತ್ತಿಕೊಂಡ. ಇದು ನಮ್ಮ ಸಂಬಂಧಗಳಲ್ಲಿನ ಅವಿಸ್ಮರಣೀಯ ಕ್ಷಣವಾಗಿದ್ದು, ನಾನು ಮಾರ್ಕೋನನ್ನು ಪ್ರೀತಿಸಿ ಸರಿಯಾದ ಆಯ್ಕೆಯನ್ನು ಮಾಡಿಕೊಂಡೆ ಎಂದು ಅನ್ನಿಸಿತು. ನಲ್ವತ್ತನೆಯ ವಯಸ್ಸಿನಲ್ಲಿ ನಾನು ನೀಲಿ ಕಣ್ಣುಗಳ, ಸುವರ್ಣ ಕೂದಲಿನ ಮಗನ ತಾಯಿಯಾದೆ. ಅವನು ತನ್ನ ತಂದೆಯಂತೆ ಬಿಳಿಯ ಚರ್ಮದವನಾಗಿರಲಿಲ್ಲ; ಆದರೆ ನನಗಿಂತ ಸಾಕಷ್ಟು ಒಳ್ಳೆಯ ಬಣ್ಣವನ್ನು ಹೊಂದಿದ್ದ. ಅವನಿಗೆ ನನ್ನ ದಿವಂಗತ ಸಹೋದರನ 'ನೀಲ್' ಹೆಸರನ್ನಿಟ್ಟೆ. ಮಾರ್ಕೋ ಇದಕ್ಕೆ ಅಡ್ಡಿಪಡಿಸಲಿಲ್ಲ. ಅವನು ತಂದೆಯಾದ ಖುಷಿಯಲ್ಲಿದ್ದ.

ಮಗ ಹುಟ್ಟಿದ ಸಂದರ್ಭದಲ್ಲಿ ಬರ್ನಾರ್ಡ್ ಮತ್ತು ಅಲಿಸಾ ಕೋಪನ್‌ಹೇಗನ್‌ಗೆ ಬಂದರು. ಅವರು ನಮ್ಮ ಮನೆಯಲ್ಲಿ ಉಳಿಯದೆ, ಹೊಟೇಲ್‌ನಲ್ಲಿ ಉಳಿದರು. ತಮಗಾಗಿ ಬಾಡಿಗೆಯ ಕಾರನ್ನು ಸಹ ಅವರೇ ಬುಕ್ ಮಾಡಿಕೊಂಡರು. ಬರ್ನಾರ್ಡ್ ಮತ್ತು ಅಲಿಸಾ ಮೊದಲು ತಮ್ಮ ಮೊಮ್ಮಗನನ್ನು ನೋಡಲು ಆಸ್ಪತ್ರೆಗೆ ಬಂದರು. ನಂತರ ನಾನು ಮನೆಗೆ ಬಂದಾಗ ಮನೆಗೂ ಬಂದರು. ನನಗೆ ಮತ್ತು ತಮ್ಮ ಮೊಮ್ಮಗನಿಗೆ ಪ್ರಾಮ್ ಅನ್ನು (ಮಕ್ಕಳ ವಾಹನ) ಉಡುಗೊರೆಯಾಗಿ ಕೊಟ್ಟರು. ಅವರು ಕೊಟ್ಟ ಪ್ರಾಮ್‌ನಲ್ಲಿ ನೀಲ್‌ನನ್ನು ಮಲಗಿಸಿ ಅಡ್ಡಾಡುವುದು ಹೆಮ್ಮೆಯೆನಿಸುತ್ತಿತ್ತು. ಅವರು ಔಪಚಾರಿಕ ಆಹ್ವಾನದಿಂದಾಗಿ ಮಾತ್ರ ನಮ್ಮ ಮನೆಯಲ್ಲಿ ಊಟ ಮಾಡಿದರು. ನಾನೇ ಮಾರ್ಕೋಗೆ, ನಿಮ್ಮ ತಂದೆ–ತಾಯಿ ಅಷ್ಟು ದೂರದಿಂದ ಬಂದಿದ್ದಾರೆ, ಹೊಟೇಲ್‌ನಲ್ಲಿ ಉಳಿದುಕೊಂಡಿದ್ದಾರೆ, ನಮ್ಮ ಮನೆಗೆ ಅವರನ್ನು ಒಮ್ಮೆಯಾದರೂ ಊಟಕ್ಕೆ ಆಹ್ವಾನಿಸಿ ಎಂದು ಒತ್ತಾಯಿಸಿದೆ.

ರೆಸ್ಟೋರೆಂಟಿನಿಂದ ಊಟವನ್ನು ತರಿಸುತ್ತೇನೆ ಎಂದ ಮಾರ್ಕೋ. ಆದರೆ ನಾನೇ ನಿಂತು ನನ್ನ ಕೈಯಾರೆ ಅವರಿಗೆ ಅಡುಗೆ ಮಾಡಿದೆ. ತುಂಬಾ ಪ್ರೀತಿಯಿಂದ ಅವರಿಗೆ ಉಣಬಡಿಸಿದೆ. ಅವರು ನನ್ನ ಅಡುಗೆಯ ಬಗ್ಗೆ ಲೇಶಮಾತ್ರವೂ ಪ್ರಶಂಸಿಸಲಿಲ್ಲ. ನನಗೆ ನನ್ನ ಹಿಂದಿನ ಅತ್ತೆಮನೆಯವರು ನೆನಪಾಗುತ್ತಿದ್ದರು. ಲಾರ್ಸ್‌ನ ಪರಿವಾರದವರು ನಾನು ಮಾಡಿದ ಅಡುಗೆಯನ್ನು ತುಂಬಾ ಇಷ್ಟದಿಂದ ಊಟ ಮಾಡಿ, ನನ್ನ ಅಡುಗೆಯನ್ನು ಪ್ರಶಂಸಿಸುತ್ತಿದ್ದರು. ಇರಲಿ, ಈ ಜಗತ್ತಿನಲ್ಲಿ ಎಲ್ಲರೂ ಒಂದೇ ತೆರನಾಗಿ ಇರುವುದಿಲ್ಲ. ಈ ಜಗತ್ತು ಬಹುರೂಪಿ.

ನಾನು ಒಂದು ವರ್ಷದ ಮೆಟರ್ನಿಟಿ ರಜಾದಲ್ಲಿದ್ದೆ. ನೀಲ್‌ನನ್ನು ಪಡೆದು ಅತೀವ ಸಂತಸದಲ್ಲಿದ್ದೆ. ನಾನು ನನ್ನೆಲ್ಲಾ ದೂರು ದುಮ್ಮಾನಗಳನ್ನು ಮರೆತು ನನ್ನೆಲ್ಲಾ ಪ್ರೀತಿಯನ್ನು ಅವನ ಮೇಲೆ ಸುರಿದೆ.

ನಾನು ಮೆಟರ್ನಿಟಿ ರಜಾವನ್ನು ಕಳೆದು ಶಾಲೆಗೆ ಜಾಯಿನ್ ಆಗಿದ್ದೆ, ಆಗಲೇ ನನ್ನ ಜೀವನದಲ್ಲಿ ಮತ್ತೊಂದು ತಿರುವು ಬಂತು. ಮಾರ್ಕೋ ಯುಎಸ್‌ಎ ಮೈಕ್ರೋಸಾಫ್ಟ್ ಕಚೇರಿಯಲ್ಲಿ ನೌಕರಿ ಪಡೆದ. ನಾನು ನನ್ನ ಶಾಲೆಯ ನೌಕರಿಯನ್ನು ಬಿಡಲು ಬಯಸುತ್ತಿರಲಿಲ್ಲ. ಆದರೆ ಮಾರ್ಕೋ ಯುಎಸ್‌ಎಗೆ ಹೋಗಲು ತುಂಬಾ ಕಾತರನಾಗಿದ್ದ. ಶಾಲೆಯಿಂದ ರಜಾ ಪಡೆದು ಹೋಗಲೂ ಯೋಚಿಸಿದೆ. ಆದರೆ ಮಾರ್ಕೋ ಅಮೆರಿಕದಿಂದ ಮರಳಿ ಬರುವ ಬಗ್ಗೆ ನಿಶ್ಚಿತವಾಗಿ ಏನೂ ಹೇಳಲಾಗದು ಎಂದು ಹೇಳಿದ; ನಾವು ಅಲ್ಲಿಯೇ ಕಾಯಂ ಆಗಿ ನೆಲೆಸಲೂಬಹುದು ಎಂದೂ ಹೇಳಿದ. ನೌಕರಿಯಲ್ಲಿರುವ ಮಹಿಳೆಗೆ, ಪರಿವಾರವನ್ನು ಆಯ್ಕೆ ಮಾಡಿಕೊಳ್ಳಬೇಕೋ ಅಥವಾ ಕೆರಿಯರ್ ಆಯ್ಕೆ ಮಾಡಿಕೊಳ್ಳಬೇಕೋ ಎಂಬ ಚಾಲೆಂಜ್ ಇರುತ್ತದೆ. ನಾನು ಪರಿವಾರಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟೆ.

ನನ್ನ ನೌಕರಿಗೆ ರಾಜೀನಾಮೆಯನ್ನು ಕೊಟ್ಟೆ, ಗೃಹಸ್ಥ ಜೀವನದ ಜವಾಬ್ದಾರಿಯನ್ನು ಹೊತ್ತೆ. ಕೆಲವು ವಸ್ತುಗಳನ್ನು ಪ್ಯಾಕ್ ಮಾಡಿದೆ, ಕೆಲವನ್ನು ಮಾರಿದೆ, ಕೆಲವನ್ನು ಹಾಗೆಯೇ ಬಿಟ್ಟೆ.

'ನನಗೆ ಅಲ್ಪ ಸ್ವಲ್ಪ ನೆನಪಾಗುತ್ತಿದೆ...' ಪಾಲ್ ನನ್ನನ್ನು ದುರುಗುಟ್ಟಿ ನೋಡುತ್ತಾ ಹೇಳಿದ.

'ನಿಮಗೆ ಶಾಲೆ ಫೇರ್‌ವೆಲ್ ಕೊಟ್ಟಿತ್ತು. ಪ್ರಿನ್ಸಿಪಾಲ್ ವಿಲಿಯಮ್ ಥರಾನೆಯವರು ಇಪ್ಪತ್ತು ನಿಮಿಷಗಳ ದೀರ್ಘ ಭಾಷಣದಲ್ಲಿ ನಿಮ್ಮನ್ನು ತುಂಬಾ ಹೊಗಳಿದ್ದರು.

'ಹೌದು, ನಮ್ಮದು ಉತ್ತಮ ಸಂಬಂಧವಾಗಿತ್ತು. ಅವರು ನನಗೆ ಏಸುಕ್ರಿಸ್ತನಂತಿದ್ದರು. ಆದರೆ ನಾನು ಅಮೆರಿಕದಿಂದ ಮರಳಿ ಬಂದಾಗ ಅವರು ನಿವೃತ್ತರಾಗಿದ್ದರು.'

ಮತ್ತೆ ಪಾಲ್...

ನಾನು ಶಾಲೆಯಿಂದ ಬೀಳ್ಕೊಂಡು ಹೋಗುತ್ತಿರುವಾಗ ಪಾಲ್ ಶಾಲೆಗೆ ಸೇರಿಕೊಂಡಿದ್ದ... ನಾವು ಅಷ್ಟು ವರ್ಷಗಳ ನಂತರ ಮತ್ತೊಮ್ಮೆ ಪರಸ್ಪರ ಎದುರಿಗಿದ್ದೆವು; ಅವನು ನನ್ನ ಪ್ರಿಯ ಗ್ರಾಹಕನಾಗಿದ್ದ, ನಾನು ಅವನಿಗೆ ಮಸಾಜ್ ಮಾಡುವ ಉದ್ಯೋಗಿಯಾಗಿದ್ದೆ.

**ಸಂಯುಕ್ತ ರಾಜ್ಯ ಅಮೆರಿಕ (ಉತ್ತರ ಅಮೆರಿಕ)**

ಇಂದು ಜಗತ್ತಿನಲ್ಲಿ 195 ದೇಶಗಳಿವೆ. ನಾನು ವಿಶ್ವದ ಸರ್ವೋಚ್ಚ ಶ್ರೀಮಂತ ಮತ್ತು ಶಕ್ತಿಶಾಲಿ ಮಹಾದೇಶಕ್ಕೆ ಬಂದಿದ್ದೆ. ನಾನು ಏಷಿಯಾ, ಆಫ್ರಿಕಾ ಮತ್ತು ಯೂರೋಪಿನ ನಂತರ ನಾಲ್ಕನೆಯ ಮಹಾದ್ವೀಪ – ಉತ್ತರ ಅಮೆರಿಕದಲ್ಲಿ ಜೀವನವನ್ನು ಸಾಗಿಸಬೇಕಿತ್ತು. ಮಾರ್ಕೋ ಮೈಕ್ರೋಸಾಫ್ಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಮೈಕ್ರೋಸಾಫ್ಟ್‌ನ ಪ್ರಮುಖ ಕೋಟೆ ಸಿಯಾಟಲ್ ಆಗಿತ್ತು. ಹೀಗಾಗಿ ನಾವು ವಾಷಿಂಗ್ಟನ್ ರಾಜ್ಯದ ಪ್ರಮುಖ ರೇವುಪಟ್ಟಣ ನಗರ, ಸಿಯಾಟಲ್‌ನಲ್ಲಿ ನೆಲೆಸಿದೆವು. ನನಗೆ ಇದರ ಉಪಹೆಸರು 'ಎಮರಾಲ್ಡ್ ಸಿಟಿ' ತುಂಬಾ ಇಷ್ಟವಾಗುತ್ತಿತ್ತು. ಏಕೆಂದರೆ ನಗರ ಮತ್ತು ಸುತ್ತಮುತ್ತಲಿನ ಪ್ರದೇಶ ವರ್ಷವಿಡೀ ಹಸುರಾಗಿರುತ್ತದೆ.

ಎಮರಾಲ್ಡ್ ಸಿಟಿಯಲ್ಲಿ ವಾಸಿಸುವವರು ಅದೃಷ್ಟವಂತರು. ಆದರೆ ಒಂದು ಹೊಸ ನಗರ ಅಥವಾ ದೇಶದಲ್ಲಿ ಹೊಸ ಜೀವನವನ್ನು ಆರಂಭಿಸುವುದು ರೋಮಾಂಚಕ ಮತ್ತು ಚಾಲೆಂಜ್ ಎರಡೂ ಆಗಿರುತ್ತದೆ. ನಾವು ನಮ್ಮ ಹೊಸ ಫ್ಲಾಟಿಗೆ ಹೋದಾಗ, ಅಜ್ಞಾತ ನಿಶ್ಶಬ್ದ ಮತ್ತು ಶೂನ್ಯತೆ ನಮ್ಮನ್ನು ಆವರಿಸಿಕೊಂಡಿತು. ನಾವು ನಮ್ಮ ವಸ್ತುಗಳನ್ನು ಹೊರ ತೆಗೆದೆವು; ಹೊಸ ಫರ್ನಿಚರ್ ಕೊಂಡೆವು. ಎಲ್ಲವನ್ನೂ ವ್ಯವಸ್ಥಿತಗೊಳಿಸಿದೆವು. ಕ್ರಮೇಣ ಖಾಲಿ ಫ್ಲಾಟ್ ಮನೆಯಾಗಿ ಬದಲಾಯಿತು. ಸೋಷಿಯಲ್ ಸೆಕ್ಯೂರಿಟಿ ಕಾರ್ಡ್, ಹೆಲ್ತ್ ಇನ್ಶೂರೆನ್ಸ್, ಟೆಲಿಫೋನ್ ಕನೆಕ್ಷನ್ ತೆಗೆದುಕೊಳ್ಳುವುದು, ಕಾರು ಖರೀದಿಸುವುದು ಹೀಗೆ ಎಲ್ಲಾ ಅಗತ್ಯಗಳನ್ನು ಈಡೇರಿಸಿಕೊಳ್ಳುತ್ತಿದ್ದೆವು. ಓಹ್, ಮನುಷ್ಯನ ಚಿಕ್ಕ ಜೀವನಕ್ಕೆ ಏನೆಲ್ಲಾ ಬೇಕಾಗುತ್ತದೆ. ಒಂದು ಕೆಲಸ ಇನ್ನೂ ಮುಗಿದಿರುವುದಿಲ್ಲ, ಆಗಲೇ ಇನ್ನೊಂದು ಕೆಲಸ ಕಾಯುತ್ತಾ ನಿಂತಿರುತ್ತದೆ.

ಮನೆಯ ಕೆಲಸಗಳೆಲ್ಲವೂ ಮುಗಿದ ನಂತರ ನಾವು ಬಾಗಿಲ ಮೇಲೆ, 'ಮಾರ್ಕೋ ಜೋಲಿ ಲೆರಾಯ್ ಮತ್ತು ನ್ಯಾನ್ಸಿ ಮ್ಯಾಥ್ಯೂ ಲೆರಾಯ್' ಎಂದು ನೇಮ್‌ಪ್ಲೇಟ್ ಹಾಕಿದೆವು. ಅಕ್ಕಪಕ್ಕದ ಮನೆಯವರ ನೇಮ್‌ಪ್ಲೇಟ್‌ಗಳನ್ನು ಗಮನಿಸಿದ್ದೆ. ನಮ್ಮ ಮೂರು ಅಂತಸ್ತಿನ ಕಟ್ಟಡದಲ್ಲಿ ಒಟ್ಟು ಏಳು ಪರಿವಾರಗಳಿದ್ದು, ಪ್ರತಿಯೊಂದು ಅಂತಸ್ತಿನಲ್ಲಿ ಎರಡು ಪರಿವಾರಗಳು ವಾಸಿಸುತ್ತವೆ ಎಂಬ ವಿಷಯ ಏಜೆಂಟ್‌ನಿಂದ ಮೊದಲೇ ತಿಳಿದಿತ್ತು. ಬಿಲ್ಡರ್ ಹೆಚ್ಚು ಹಣ ಸಂಪಾದಿಸುವ ಉದ್ದೇಶದಿಂದ ಬೇಸ್‌ಮೆಂಟ್‌ನಲ್ಲೂ ಒಂದು ಫ್ಲಾಟನ್ನು ಕಟ್ಟಿಸಿದ್ದ. ಅಲ್ಲಿ ಯುವ ದಂಪತಿಗಳಿದ್ದರು. ಅವರ ಬಾಗಿಲ ಮೇಲೆ 'ಅಭಿಲಾಷ್ ಶರ್ಮಾ ಮತ್ತು ಶೋಭನಾ ಮೋಹನ್' ಎಂದು ನೇಮ್‌ಪ್ಲೇಟ್ ಹಾಕಲಾಗಿತ್ತು. ಇಬ್ಬರೂ ಭಾರತೀಯರಾಗಿದ್ದು, ಮಲ್ಟಿನ್ಯಾಷನಲ್ ಕಂಪನಿಗಳಲ್ಲಿ ಪ್ರೊಫೆಶನಲ್ಸ್‌ಗಳಾಗಿದ್ದರು. ಇಬ್ಬರೂ ತಮ್ಮ ಸಂಸಾರ ಮತ್ತು ನೌಕರಿಯಲ್ಲಿ ತುಂಬಾ ವ್ಯಸ್ತರಾಗಿದ್ದಂತೆ ತೋರುತ್ತಿದ್ದರು. ಬಿಲ್ಡಿಂಗ್ ಒಳಗೆ ಬಂದುಹೋಗುವ ವೇಳೆಯಲ್ಲಿ ಅವರೊಂದಿಗೆ ಮೂರ್ನಾಲ್ಕು ಬಾರಿ ಮಾತುಕತೆ ನಡೆದಿತ್ತು. ಇಬ್ಬರ ತಂದೆ ತಾಯಿ ಭಾರತದಲ್ಲಿದ್ದರು. ಇಬ್ಬರೂ ಅಧ್ಯಯನಕ್ಕಾಗಿ ಅಮೆರಿಕಕ್ಕೆ ಬಂದಿದ್ದರು. ಒಟ್ಟಿಗೆ ಎಂಜಿನಿಯರಿಂಗ್ ಮಾಡಿದ್ದರು. ಅಲ್ಲಿಯೇ ಅವರ ಡೇಟಿಂಗ್ ಆರಂಭವಾಯಿತು; ಏಳು ತಿಂಗಳ ಹಿಂದೆಯಷ್ಟೇ ಅವರ ವಿವಾಹ ಭಾರತದಲ್ಲಿ ನಡೆದಿತ್ತು.

ಉಳಿದ ಅಕ್ಕಪಕ್ಕದವರೊಂದಿಗೂ ಅಲ್ಪಸ್ವಲ್ಪ ಮಾತುಕತೆ ನಡೆದಿತ್ತು. ನಮ್ಮ ಫ್ಲಾಟಿನ ನೇರದಲ್ಲಿ ಜೇಸಿಕಾ ಸ್ಮಿತ್ ಮತ್ತು ಅಶೋಕ್ ಸೇಠಿ ಜೋಡಿಗಳಿದ್ದರು. ಜೇಸಿಕಾ ಅಮೆರಿಕದವಳಾಗಿದ್ದು, ಅಶೋಕ್ ಇಂಡಿಯನ್ ಆಗಿದ್ದ. ನಮ್ಮಂತೆಯೇ ಅವರೂ ಸಹ ಮಿಶ್ರಿತ ಜೋಡಿಗಳಾಗಿದ್ದರು. ನಮ್ಮ ಗೆಳೆತನ ಅವರೊಂದಿಗೆ ಮುಂದುವರೆಯಲಿಲ್ಲ. ಕಟ್ಟಡದ ಖರ್ಚಿನ ಬಗ್ಗೆ ತೀರ್ಮಾನಿಸಲು ಎಲ್ಲಾ ಫ್ಲಾಟ್‌ನವರು ಕಲೆತಾಗಲಷ್ಟೇ ಒಂದೆರಡು ಮಾತುಕತೆ ನಡೆಯುತ್ತಿತ್ತು.

ನಾನು ಮೊದಲ ಬಾರಿಗೆ ಅಮೆರಿಕ ನೆಲದ ಮೇಲೆ ಕಾಲಿಟ್ಟಿದ್ದೆ. ಆರಂಭದಲ್ಲಿ ಯಾರ ಪರಿಚಯವೂ ಇರಲಿಲ್ಲ. ಸೋಷಿಯಲ್